# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

# Spl.C. No. 205/2018

ಪ್ರಾಸಾ 13

ಚಾಸಾ 20

ಹೆಸರು ನಂದಿಶಯ್ಯ

ತಂದೆ ಹೆಸರು ಲೇಟ್ ಚೆನ್ನಯ್ಯ

ವಯಸ್ಸು 54 ವರ್ಷ

ಉದ್ಯೋಗ ಮುಖ್ಯ ಪೇದೆ, ತುಮಕೂರು ನಗರ ಠಾಣೆ

ವಾಸಸ್ಥಳ ತುಮಕೂರು

ಸಾಕ್ಷಿಯನ್ನು ದಿನಾಂಕ 03.08.2026 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ದಿನಾಂಕ 25.05.2012 ರಿಂದ 26.06.2018 ರವರೆಗೆ ತಿಪಟೂರು ಪೊಲೀಸ್ ಉಪವಿಭಾಗದ ಕಛೇರಿಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ತನಿಖಾ ಕಾಲದಲ್ಲಿ ತನಿಖಾಧಿಕಾರಿಯು ಚಾಸಾ.1 ಮತ್ತು 2 ರವರನ್ನು ವಿಚಾರಣೆ ಮಾಡುವ ಸಂದರ್ಭದಲ್ಲಿ ಸೋನಿ ಹ್ಯಾಂಡಿ ಕ್ಯಾಮ್ ನಿಂದ ವಿಡಿಯೋ ಚಿತ್ರೀಕರಣವನ್ನು ಮಾಡಿಕೊಂಡಿರುತ್ತೇನೆ. ಅದನ್ನು ಡಿವಿಡಿಗೆ ವರ್ಗಾಯಿಸಿ ತನಿಖಾಧಿಕಾರಿಗೆ ನೀಡಿರುತ್ತೇನೆ. ಡಿವಿಡಿಯನ್ನು ನಿಪಿ.12 ಎಂದು ಗುರುತಿಸಲಾಯಿತು. ಸದರಿ ಡಿವಿಡಿಗೆ ಸಂಬಂಧಿಸಿದಂತೆ ಭಾರತೀಯ ಸಾಕ್ಷ್ಯಅಧೀನಿಯಮ ಕಲಂ 65(ಬಿ) ರಡಿಯಲ್ಲಿ ಪ್ರಮಾಣ ಪತ್ರವನ್ನು

ನೀಡಿರುತ್ತೇನೆ. ಅದನ್ನು ನಿಪಿ. 13 ಎಂದು, ಸಾಕ್ಷಿಯಸಹಿಯನ್ನು ನಿಪಿ.13(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ 1 ರಿಂದ 6 ನೇ ಆರೋಪಿ ಪರ ಶ್ರೀ.ಎನ್.ಬಿ . ವಕೀಲರಿಂದ :**

3) ಚಾಸಾ.1 ಮತ್ತು 2 ರವರ ಹೇಳಿಕೆಗಳನ್ನು ಇನ್ನೊಬ್ಬರು ಕಛೇರಿ ಸಿಬ್ಬಂದಿ ಟೈಪ್ ಮಾಡಿಕೊಳ್ಳುತ್ತಿದ್ದರು. ಚಾಸಾ.1 ಮತ್ತು 2 ರವರ ಹೇಳಿಕೆಗಳನ್ನು ನಾನು ವಿಡಿಯೋ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ.1 ಮತ್ತು 2 ರವರು ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ 7 ನೇ ಆರೋಪಿ ಪರ ಶ್ರೀ.ಕೆ ಎನ್ ಎಲ್ . ವಕೀಲರಿಂದ :**

4) ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ.1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸಾ ಸ ಇ ಎ ಒ**

**ಸಹಿ/_**

**3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು.**

ಸಾಕ್ಷಿಯ ಸಹಿ